BKN-01

Sl.No. : **Total No. of Pages : 3**

ಪ್ರಥಮ ವರ್ಷದ ಬಿ.ಎ./ಬಿ.ಕಾಂ. ಪದವಿ ಪರೀಕ್ಷೆ, ಅಕ್ಟೋಬರ್/ನವೆಂಬರ್ - 2025

(SLM Scheme)

ಕನ್ನಡ ಭಾಷೆ (ಪತ್ರಿಕೆ–೧)

ಸವಿಸ್ತರ ಮತ್ತು ಅವಿಸ್ತರ ಪಠ್ಯಗಳು

(ಹೊಸಗನ್ನಡ ಕವಿತೆಗಳು, ಏಕಾಂಕ ನಾಟಕಗಳು, ಪ್ರಬಂಧ ಮತ್ತು ಆಡಳಿತ ಕನ್ನಡ)

ಸಮಯ : 3 ಗಂಟೆಗಳು **ಗರಿಷ್ಠಾಂಕಗಳು : 80**

ಸೂಚನೆ : *ಎಲ್ಲಾ ಪ್ರಧಾನ ಪ್ರಶ್ನೆಗಳೂ ಕಡ್ಡಾಯ.*

ವಿಭಾಗ–ಎ

(ಹೊಸಗನ್ನಡ ಕವಿತೆಗಳು, ಏಕಾಂಕ ನಾಟಕಗಳು : 20 ಅಂಕಗಳು)

ಪ್ರ1) ಎರಡರ ಭಾವವನ್ನು ಸಂದರ್ಭಸಹಿತ ವಿವರಿಸಿ: **[2×4=8]**

೧) 'ಶ್ರೀಸಾಮಾನ್ಯ'ನೆ ಭಗವನ್ ಮಾನ್ಯಂ;

'ಶ್ರೀಸಾಮಾನ್ಯ'ನೆ ಭಗವದ್ ಧನ್ಯಂ;

ಸಾಮಾನ್ಯತೆ ಭಗವಂತನ ರೀತಿ!

ಸಾಮಾನ್ಯರೊ ನಾವು;!

ಅಥವಾ

ನಮ್ಮೂರ

ಬಂಡೆ ಬಂಡೆಯ ಮೇಲೆ

ಪ್ರಗತಿ ಪಂಥದ ಹಾಡು

ಇಲ್ಲಿಯ

ನಾಯಿ ನರಿಗಳೂ

ಸಮಾನತೆಯಿಂದ ಬೊಗಳುತ್ತವೆ.

೨) ದೇವರ ಮನೇನಾ? ದೇವ್ರಿಗೂ ಮನೆ ಬೇಕಾ? ಇಷ್ಟು ದಿನಗಳಾದ್ವು, ಅವನು ಹುಟ್ಟಿ ಇನ್ನೂ ಒಂದು ಮನೇನು ಕಟ್ಟಿಕೊಂಡಿಲ್ಲವಾ? ಅಯ್ಯೋ ಪಾಪ!

ಅಥವಾ

ಹಾಗಾದ್ರೆ ನನಗೆ ದಿಕ್ಕೆ ಇಲ್ಲವೆ? ನೀವು ನನ್ನ ಪ್ರಾಮಾಣಿಕತೆ ನೋಡಿಯಾದರೂ ಬಿಡುಗಡೆ ಮಾಡೊಲ್ಲವೆ? (ಮೌನ) ನಾನೊಬ್ಬ ದುರ್ಬಲ ಜೀವಿ, ನನಗೆ ಸಹಾಯ ಮಾಡಿ, ನನ್ನ ಜೀವ ಉಳಿಸಿ.

ಪ್ರ2) ಎಂಟು ಪದಗಳಿಗೆ ಅರ್ಥ ಬರೆಯಿರಿ: **[8×½=4]**

ಪತಾಕೆ, ಧೂಪ, ಜರೆ, ಬಾನು, ಗೂನ, ಪಗಾರ, ಚಿತೆ, ಇಳೆ, ಕಂದೀಲು, ಗಟಾರ, ನೆವ, ವೇಧೆ.

ಪ್ರ3) ಯಾವ ಪಠ್ಯವನ್ನು ಬಿಡದೆ ನಾಲ್ಕರ ಸಂದರ್ಭ ಸ್ವಾರಸ್ಯ ಬರೆಯಿರಿ: **[4×2=8]**

೧) ಅತ್ತಾರೆ ಅತ್ತುಬಿಡು ಹೊನಲು ಬರಲಿ ನಕ್ಕ್ಯಾಕ ಮರಸತಿ ದುಕ್ಕ?

೨) ಮುತ್ತಜ್ಜ ಕಟ್ಟಿದ ಮನೆ ದೀಪ ಹಚ್ಚುವರಿಲ್ಲ.

೩) ಭಾಷಣದಗಳ ಬೆಂಕಿಯಲ್ಲಿ ಬೆಂದು ಬೂದಿಯಾದೋರು ನನ್ನ ಜನಗಳು.

೪) ಒಳ್ಳೆ ಕೆಲಸಕ್ಕೆ ಏಳು ಸಮುದ್ರ ದಾಟಬೇಕಾಗುತೆ

೫) ನಾನಿಲ್ಲೇ ಕೂಡೋದು, ನಾನಿಲ್ಲೆ ನಿಂದ್ರೊದು.

೬) ಗಾಳಿಯಿಲ್ಲ ಗೂಳಿಯಿಲ್ಲ ಮೈಯಾಗ

ವಿಭಾಗ–ಬಿ

(ಹೊಸಗನ್ನಡ ಕವಿತೆಗಳು, ಏಕಾಂಕ ನಾಟಕಗಳು : 30 ಅಂಕಗಳು)

ಪ್ರ4) ಎರಡು ಪ್ರಶ್ನೆಗಳಿಗೆ ಉತ್ತರಿಸಿ: **[2×10=20]**

೧) ಅನಾಥೆಯ ಬದುಕಿನ ಗೋಳಿನ ದುರಂತ ಚಿತ್ರಣ 'ದುಃಖಸೇತು' ಕವಿತೆಯಲ್ಲಿ ಹೇಗೆ ವ್ಯಕ್ತವಾಗಿದೆ? ವಿವರಿಸಿ.

ಅಥವಾ

ಶೋಷಣೆಯ ವಿಭಿನ್ನ ಮುಖಗಳು 'ನನ್ನ ಜನಗಳು' ಕವಿತೆಯಲ್ಲಿ ಹೇಗೆ ಅಭಿವ್ಯಕ್ತಗೊಂಡಿದೆ? ನಿರೂಪಿಸಿ.

೨) ರಾಮಶೆಟ್ಟಿ ಮತ್ತು ಪರಮೆಶ್ವರಪ್ಪನ ಪಾತ್ರಗಳನ್ನು ವಿಷದಪಡಿಸಿ.

ಅಥವಾ

'ಟಿಂಗರ ಬುಡ್ಡಣ್ಣ' ನಾಟಕದ ವಸ್ತು, ಪಾತ್ರ ಮತ್ತು ಭಾಷೆಯ ಮಹತ್ವವನ್ನು ನಿರೂಪಿಸಿ.

ಪ್ರ5) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ: **[2×5=10]**

೧) 'ಗಂಗಾಮಾಯಿ ಕವಿತೆಯ ಆಶಯ

ಅಥವಾ

'ದಾಸಿಮಯ್ಯ ಮತ್ತು ಬೆಕ್ಕು' ಕವಿತೆಯಲ್ಲಿ ವ್ಯಕ್ತಗೊಂಡಿರುವ ಭಕ್ತಿಯ ಢಾಂಬಿಕತೆ

೨) ಯಮುನಾಳ ಪಾತ್ರವನ್ನು ಪರಿಚಯಿಸಿ.

ಅಥವಾ

'ತೆರೆಗಳು' ನಾಟಕದ ಕಿಟ್ಟಿ ಪಾತ್ರ

ವಿಭಾಗ–ಸಿ

(ಪ್ರಬಂಧ ಮತ್ತು ಆಡಳಿತ ಕನ್ನಡ : 30 ಅಂಕಗಳು)

ಪ್ರ6) ಎರಡು ಪ್ರಶ್ನೆಗಳಿಗೆ ಉತ್ತರಿಸಿ: **[2×10=20]**

೧) ರಾಮು ದಿವಾನಖಾನೆಯನ್ನು ಏನು ಮಾಡಿದನು? ಇದರ ಪರಿಣಾಮವೇನು? ವಿವರಿಸಿ.

ಅಥವಾ

ಅಮೇರಿಕದಲ್ಲಿ ಲೇಖಕರು ಟೋಪಿ ಹಾಕಿ ಅನುಭವಿಸಿದ ಸಿಹಿಕಹಿ ಘಟನೆಗಳನ್ನು ವಿವರಿಸಿ.

೨) ಆಡಳಿತ ಕನ್ನಡ ಎಂದರೇನು? ಅದು ಬೆಳೆದು ಬಂದ ಬಗೆಯನ್ನು ವಿವರಿಸಿ.

ಅಥವಾ

ಜಾಹೀರಾತು ಎಂದರೇನು? ಉದಾಹರಣೆ ಸಹಿತ ವಿವರಿಸಿ.

ಪ್ರ7) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ: **[2×5=10]**

೧) ಸಜ್ಜನರೆನಿಸಿಕೊಳ್ಳುವುದು ಕಷ್ಟದ ಕೆಲಸ

ಅಥವಾ

'ವಿರಾಟಪರ್ವದ ಸ್ವಾರಸ್ಯ' ಪ್ರಬಂಧದ ಆಶಯ

೨) ಅಭ್ಯರ್ಥನ ಪತ್ರ

ಅಥವಾ

ಗಣಕಯಂತ್ರ ಮತ್ತು ಕನ್ನಡ ಲೋಕ